# ಶಶಾಂಕ

## Shashanka-Wall Magazine

೨೦೨೩-೨೪ನೇ ಸಾಲಿನ ಕನ್ನಡ ಗೋಡೆ ಪತ್ರಿಕೆ
ಕನ್ನಡ ಸಂಘ , ಕನ್ನಡ ವಿಭಾಗ, ಶೇಷಾದ್ರಿಪುರಂ ಕಾಲೇಜು,
#೨೮, ನಾಗಪ್ಪಬೀದಿ, ಶೇಷಾದ್ರಿಪುರಂ, ಬೆಂಗಳೂರು-೫೬೦೦೨೦

### ಬಿರುದಾಂಕಿತರು

ಪಂಪ - ಆದಿಕವಿ
ಜನ್ನ - ನಾಳ್ಪ್ರಭು ಜನಾರ್ಧನದೇವ
ರನ್ನ- ಕವಿ ಚಕ್ರವರ್ತಿ
ಕುಮಾರವ್ಯಾಸ - ರೂಪಕ ಸಾಮ್ರಾಜ್ಯ ಚಕ್ರವರ್ತಿ
ರಾಘವಾಂಕ - ಷಟ್ಪದಿ ಬ್ರಹ್ಮ
ಹರಿಹರ - ರಗಳೆ ಕವಿ
ಪೊನ್ನ - ಉಭಯ ಚಕ್ರವರ್ತಿ
ನಾಗಚಂದ್ರ - ಅಭಿನವ ಪಂಪ
ಚಾವುಂಡರಾಯ - ವೀರ ಮಾರ್ತಾಂಡ ದೇವ
ಲಕ್ಷ್ಮೀಶ - ಉಪಮಾಲೋಲ
ಕೇಶಿ ರಾಜ - ಕರ್ನಾಟಕ ಲಕ್ಷಣ ಶಿಕ್ಷಚರ್ಯ
ಷಡಕ್ಷರಿ - ಉಭಯ ಕವಿತಾ ವಿಶಾರದ
ಡಿ.ಎಲ್.ನರಸಿಂಹಾಚಾರ್ - ಚಲಿಸುವ ನಿಘಂಟು
ಬಿ.ಎಂ.ಶ್ರೀ - ಕನ್ನಡದ ಕಣ್ವ

### ಹಸ್ತಪ್ರತಿ

ಹಸ್ತಪ್ರತಿ ಎಂದರೆ ಮುದ್ರಿತವಲ್ಲದೆ ಹಾಗೂ ಇನ್ನಾವುದಾದರೂ ರೀತಿಯಲ್ಲಿ ನಕಲಾದುಗಳಿಲ್ಲದೆ , ಜನರಿಂದ ಕೈಯಾರೆ ಸೃಷ್ಟಿಸಲ್ಪಟ್ಟ, ಕೈಬರಹದ ವಿಷಯಗಳ ದಾಖಲಾತಿ ಹೊಂದಿರುವಂತಹ ಪತ್ರ. ಗ್ರಂಥ ಸಂಪಾದನಾ ಶಾಸ್ತ್ರಗಳಿಂದಲೇ ಹಸ್ತಪ್ರತಿ ಶಾಸ್ತ್ರವು ಉದ್ಭವಿಸಿದ್ದು ,ಇದರಿಂದಾಗಿ ಅದೆಷ್ಟೋ ಸ್ಥಳೀಯ ಅರಸರ ಚರಿತ್ರೆ, ಇತಿಹಾಸ ತಿಳಿದು ಬಂದಿದೆ. ಹದಿನೆಂಟನೆಯ ಶತಮಾನದಲ್ಲಿ ಮೈಸೂರು ಭಾಗದಲ್ಲಿ ಆಳ್ವಿಕೆ ನಡೆಸಿದ್ದ ಕಳಲೆ ನಂಜರಾಜನ ಬಗೆಗೆ ಆತನೇ ರಚಿಸಿದ ಭಕ್ತವಿಲಾಸ ದರ್ಪಣ ಕೃತಿಯ ಹಸ್ತಪ್ರತಿಯ ಪುಷ್ಪಿಕೆಯಿಂದ ಮಹತ್ತರವಾದ ಸಂಗತಿಗಳು ತಿಳಿದು ಬರುತ್ತವೆ. ಕನ್ನಡ ಭಾಷೆಯು ಹಸ್ತಪ್ರತಿಗಳಲ್ಲಿ ಸ್ಪಷ್ಟವಾದ ನೆಲೆಯನ್ನು ಕಂಡುಕೊಂಡಿದ್ದು, ಆಡುನುಡಿ ಮತ್ತು ಆ ಕಾಲದ ಪ್ರಮಾಣ ಭಾಷೆಯನ್ನು ಗಟ್ಟಿಯಾಗಿ ತೋರಿಸಿದೆ. ಆದರೆ ಮರೆಯಾಗುತ್ತಿರುವ ಹಸ್ತಪ್ರತಿಗಳನ್ನು ಸಂರಕ್ಷಿಸಲು 'ಮೈಕ್ರೋಫಿಶ್' ಅಥವಾ 'ಮೈಕ್ರೋಫಿಲ್ಮ್' ತಂತ್ರಜ್ಞಾನ, ಈಗಿನ ಡಿಜಿಟಲ್ ತಂತ್ರಜ್ಞಾನವನ್ನು ಬಳಸಿಕೊಂಡು ಹಸ್ತಪ್ರತಿಗಳನ್ನು ಸಂರಕ್ಷಿಸಲಾಗಿದೆ. ಕುವೆಂಪು ವಿರಚಿತ 'ಶ್ರೀ ರಾಮಾಯಣ ದರ್ಶನಂ', ಕವಿಯ ಸ್ವಹಸ್ತಾಕ್ಷರದಲ್ಲಿಯೇ ಮುದ್ರಿಸಿ, ಪ್ರಕಟಿಸಿದ ಕೆ. ಪಿ. ಪೂರ್ಣಚಂದ್ರ ತೇಜಸ್ವಿಯವರ ಪ್ರಯತ್ನವು ಇದಕ್ಕೆ ಉತ್ತಮ ಉದಾಹರಣೆಯಾಗಿ ನಮ್ಮ ಮುಂದೆ ಇದೆ.

### ಸಾರಾ ಅಬೂಬಕ್ಕರ್

ಕನ್ನಡದ ಕಥೆಗಾರ್ತಿ, ಕಾದಂಬರಿಗಾರ್ತಿ ಮತ್ತು ಮಹಿಳಾ ಸಂವೇದನೆಯ ಪ್ರಮುಖ ಲೇಖಕಿಯಾಗಿದ್ದ ಸಾರಾ ಅಬೂಬಕ್ಕರ್ ಅವರು ಜೂನ್ ೩೦, ೧೯೩೬ ಕಾಸರಗೋಡಿನಲ್ಲಿ ಜನಿಸಿದರು.



**ಕಾದಂಬರಿಗಳು :**
ಚಂದ್ರಗಿರಿಯ ತೀರದಲ್ಲಿ, ಸಹನಾ, ವಜ್ರಗಳು, ಪಂಜರ, ಇಳಿಜಾರು, ಕಾಣಿಕೆ, ಕದನವಿರಾಮ, ಸುಳಿಯಲ್ಲಿ ಸಿಕ್ಕವರು,ಪ್ರವಾಹ, ತಳ ಒಡೆದ ದೋಣಿ

**ಕಥಾ ಸಂಕಲನ :**
ಚಪ್ಪಲಿಗಳು, ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು, ಖೆಡ್ಡ.

**ನಾಟಕ :**
ಕಮರಿದ ಕನಸು,
ಮಗಳು ಹುಟ್ಟಿದಳು.

**ಲೇಖನ :**
ಲೇಖನ ಗುಚ್ಛ, ಮನೋಮಿ.

**ಪ್ರವಸಕಥನ :**
ಐಷಾರಾಮದ ಆಳದಲ್ಲಿ

**ಪ್ರಶಸ್ತಿ**
ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ, ನೃಪತುಂಗ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಹಂಪಿ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ, ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ.

- ಸಾರಾ ಅಬೂಬಕರ್ ಜನವರಿ ೧೦,೨೦೨೩ರಂದು ಮಂಗಳೂರಿನಲ್ಲಿ ನಿಧನರಾದರು.

### ಎಸ್.ಎಲ್. ಭೈರಪ್ಪ

ಎಸ್. ಎಲ್. ಭೈರಪ್ಪ ಇವರ ಪೂರ್ಣ ಹೆಸರು ಸಂತೇಶಿವರ ಲಿಂಗಣ್ಣಯ್ಯ ಭೈರಪ್ಪ. ೧೯೩೧ ಹಾಸನದಲ್ಲಿ ಜನಿಸಿದ ಇವರು ಆಧುನಿಕ ಕನ್ನಡ ಸಾಹಿತ್ಯದ ಕಾದಂಬರಿಕಾರರು, ವಿಮರ್ಶಕರು ಹಾಗೂ ಲೇಖಕರು. ಇವರು ಬರೆದಿರುವ ಕೃತಿಗಳು ಇಂಗ್ಲೀಷ್ ಹಾಗೂ ಭಾರತೀಯ ಭಾಷೆಗಳಿಗೆ ಅನುವಾದಗೊಂಡು ಭಾರತದ ಸಾಹಿತ್ಯವಲಯದಲ್ಲಿ ಹೆಸರಾಗಿದ್ದಾರೆ.
ಕನ್ನಡ ಸಾರಸ್ವತ ಲೋಕಕ್ಕೆ ಮೊದಲ 'ಸರಸ್ವತಿ ಸಮ್ಮಾನ್ ಪ್ರಶಸ್ತಿ'ಯ ಗೌರವವನ್ನು ತಂದುಕೊಟ್ಟವರು.



**ಕಾದಂಬರಿಗಳು :**
ಅನ್ವೇಷಣ - (೧೯೭೬)
ಕವಲು - (೨೦೧೦)
ಉತ್ತರಕಾಂಡ - (೨೦೧೭)

**ಆತ್ಮ ಚರಿತ್ರೆ :**
ಭಿತ್ತಿ

**ತತ್ತ್ವ ಶಾಸ್ತ್ರ**
ಸತ್ಯ ಮತ್ತು ಸೌಂದರ್ಯ - ಪಿ.ಎಚ್. ಡಿ

**ಪ್ರಶಸ್ತಿ**
ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ - ೧೯೬೬
ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ - ೧೯೭೫
ಪಂಪ ಪ್ರಶಸ್ತಿ - ೨೦೦೫
ನಾಡೋಜ ಪ್ರಶಸ್ತಿ - ೨೦೧೧
ಗುಲಬರ್ಗಾ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟು - ೨೦೦೭
ಪದ್ಮಭೂಷಣ ಪ್ರಶಸ್ತಿ -೨೦೨೩

### ಸಾಹಿತ್ಯ ಸಮ್ಮೇಳನ

ಕನ್ನಡ ಸಾಹಿತ್ಯ ಸಮ್ಮೇಳನವು ೧೯೧೫ ರಲ್ಲಿ ಎಚ್. ವಿ ನಂಜುಂಡಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು.೧೦೮ ವರ್ಷಗಳ ಇತಿಹಾಸ ಇರುವ ಈ ಕಾರ್ಯಕ್ರಮವು ೨೦೨೩ರ ಜನವರಿಯಂದು ದೊಡ್ಡರಂಗೇಗೌಡರ ಅಧ್ಯಕ್ಷತೆಯಲ್ಲಿ ೮೬ನೇ ಸಾಹಿತ್ಯ ಸಮ್ಮೇಳನವು ಹಾವೇರಿಯಲ್ಲಿ ಯಶಸ್ವಿಯಾಯಿತು. ೮೭ನೇ ಸಮ್ಮೇಳನವು ಮಂಡ್ಯದಲ್ಲಿ ನಡೆಯಲಿದೆ.

### ಗೌರವಾಭಿನಂದನೆ



ನಾಡಿನ ಶ್ರೇಷ್ಠರ ಸಾಲಿನ ಹಾಸ್ಯಜ್ಞ, ಉಪನ್ಯಾಸಕ, ವಿದ್ವಾಂಸ,ಅ. ರಾ. ಮಿತ್ರ ಅವರು ಫೆಬ್ರುವರಿ 25, 1935ರಂದು ಬೇಲೂರಿನಲ್ಲಿ ಜನಿಸಿದರು. ಅವರ ಪೂರ್ಣ ಹೆಸರು ಅಕ್ಕಿ ಹೆಬ್ಬಾಳು ರಾಮಣ್ಣ ಮಿತ್ರ.ಇವರ ಕೃತಿಗಳಲ್ಲಿ ಬರುವ ಪ್ರಮುಖ ಶಸ್ತ್ರ ಸಾಹಿತ್ಯ ಛಂದೋಮಿತ್ರ – ಕನ್ನಡ ಸಾಹಿತ್ಯದಲ್ಲಿ ಬಳಕೆಯಾಗಿರುವ ವಿವಿಧ ಛಂದೋಪ್ರಕಾರಗಳ ಲಕ್ಷಣೋದಾಹರಣ ಸಹಿತ ಪರಿಚಯ ಮಾಡಿಕೊಡುವ ಗ್ರಂಥ.



ಕನ್ನಡ ಸಾರಸ್ವತ ಲೋಕದಲ್ಲಿ 'ಹಂಪನಾ' ಎಂದೇ ಚಿರಪರಿಚಿತರಾಗಿರುವ ಹಂ ಪ ನಾಗರಾಜಯ್ಯ ನವರು ಇಂದಿನ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲೂಕಿನ ಹಂಪಸಂದ್ರ ಎಂಬ ಗ್ರಾಮದಲ್ಲಿ ಅಕ್ಟೋಬರ್ ೭, ೧೯೩೬ರಲ್ಲಿ ಜನಿಸಿದರು
ಚಾರುವಸಂತ(ಮಹಾಕಾವ್ಯ)
ನಾಗಶ್ರೀ, ಸವ್ಯಸಾಚಿ ಪಂಪ (ಕಾದಂಬರಿ)

ಶೇಷಾದ್ರಿಪುರಂ ಕನ್ನಡ ಸಂಘದ ಮೂಲಕ ಈ ಇಬ್ಬರು ವಿದ್ವಾಂಸರಿಗೆ ಗೌರವಾಭಿನಂದನೆ ಸಲ್ಲಿಸಲಾಯಿತು.

### ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರಿನ ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ೧೯೧೫ ಸುಮಾರಿಗೆ ಕರ್ನಾಟಕ ಸಾಹಿತ್ಯ ಪರಿಷತ್ತು ಸ್ಥಾಪನೆಯಾಯಿತು.ಆಗ ಮೈಸೂರು ಅರಸರಾಗಿದ್ದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಪರಿಷತ್ತಿನ ಸ್ಥಾಪನೆಗೆ ಚಾಲನೆ ನೀಡಿದರು. ಮುಂದೆ ೧೯೩೫ರಲ್ಲಿ ಈ ಹೆಸರನ್ನು ಕನ್ನಡ ಸಾಹಿತ್ಯ ಪರಿಷತ್ತು ಎಂದು ಬದಲಾಯಿಸಿದರು ಸಂಸ್ಥೆಯ ಈಗಿನ ಅಧ್ಯಕ್ಷರಾಗಿ ಡಾ. ಮಹೇಶ್ ಜೋಷಿ ಅವರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಅಕ್ಟೋಬರ್ ೩೧, ೨೦೦೮ರಂದು ಕೇಂದ್ರ ಸರಕಾರವು ಕನ್ನಡವನ್ನು ಶಾಸ್ತ್ರೀಯ ಭಾಷೆ ಎಂದು ಘೋಷಿಸಿತು.ಆದರೆ ಇತ್ತೀಚಿಗಷ್ಟೇ ಭಾರತ ಸರ್ಕಾರವು ಕನ್ನಡ ಶಾಸ್ತ್ರೀಯ ಅಧ್ಯಯನ ಕೇಂದ್ರವನ್ನು ಮೈಸೂರಿನ ಮಾನಸಗಂಗೋತ್ರಿಯಲ್ಲಿ ಸ್ಥಾಪಿಸಿದೆ

### ಕನ್ನಡದ ಮೊದಲುಗಳು

ಅಚ್ಚ ಕನ್ನಡದ ಮೊದಲ ದೊರೆ - ಮಯೂರವರ್ಮ
ಕನ್ನಡದ ಮೊದಲ ವೀರಗಲ್ಲು - ತಮ್ಮಟಗಲ್ಲು ಶಾಸನ
ಕನ್ನಡದಲ್ಲಿ ರಚಿತಗೊಂಡ ಮೊದಲ ರಗಳೆ - ಮಂದಾನಿಲ ರಗಳೆ
ಕನ್ನಡದ ಮೊದಲ ವಿಶ್ವಕೋಶ - ವಿವೇಕ ಚಿಂತಾಮಣಿ
ಮೊದಲ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆದ ಸ್ಥಳ - ಬೆಂಗಳೂರು
ಕನ್ನಡದ ಮೊಟ್ಟಮೊದಲ ಸಂಕಲನ ಗ್ರಂಥ - ಸೂಕ್ತಿ ಸುಧಾರ್ಣವ
ಪಂಪ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ - ಕುವೆಂಪು
ಕನ್ನಡದ ಮೊದಲ ಪ್ರೇಮಗೀತೆಗಳ ಸಂಕಲನ - ಒಲುಮೆ (ತೀನಂಶ್ರೀ)
ಕನ್ನಡದ ಮೊದಲ ಲಕ್ಷಣ ಗ್ರಂಥ - ಕವಿರಾಜಮಾರ್ಗ

### ಕನ್ನಡ

ಕನ್ನಡವೆಂಬ ಕನ್ನಡಿ ಕಂಡಾಗ
ಕೋಪವು ಕೂಡ ಕರಗಿ ಕುತಿತ್ತಂತೆ
ಕೋಗಿಲೆಯ ಕಾರ್ಯ ಕೊನೆಗೊಂಡಾಗ
ಕೂಗುವ ಕೊನೆಯ ಕ್ಷಣ ಕನ್ನಡವಾಯಿತಂತೆ
ಕನಸಿನ ಕೋಣೆಯಲ್ಲಿ. ಕತ್ತಲು ಕವಿದಾಗ
ಕವಿತೆಯ ಕಿಡಿ ಕೇಳುವವನ ಕಾಂತಿ ಕನ್ನಡವಾಗಿತಂತೆ

### ಅನಾವರಣ

ಆವರಣ ನಮ್ಮ ಆವರಣ
ಸಾವಿರ ಕನಸುಗಳ ಅನಾವರಣ
ಬಹು ಮನಸುಗಳ ಕೂಡಿಕೆಗೆ ಕಾರಣ
ಬಹು ಭಾಷೆಗಳ ಚಂಚಲದ ಚರಣ
ಅದುವೇ ನಮ್ಮ ಆವರಣ

ಏರುತಿದೆ ವಿವಿಧ ಕಲೆ
ಹೆಚ್ಚಾಗುತ್ತಲೇ ಇದೆ ಕಲೆಯ ಕಳೆ
ಹೆಜ್ಜೆ ತಾಳಗಳ ವಿಭಿನ್ನ ಅಲೆ
ಎಲ್ಲವೂ ಕೂಡಿದ ಆವರಣ
ಸಾವಿರ ನೆನಪುಗಳ ಅನಾವರಣ

ಪ್ರತಿನಿತ್ಯ ಪ್ರತಿಜೀವಿಗಳ ತಂಗುದಾಣ
ಕೂತು ನಲಿದಾಡುವ ತಾಣ
ಬಣ್ಣ ಬಣ್ಣಗಳ ಸ್ಮೃತಿಯ ಹೂಬಾಣ
ಇವೆಲ್ಲವೂ ಕೂಡಿದ ಆವರಣ
ಸಾವಿರ ಕನಸುಗಳ ಅನಾವರಣ

- ಸುಹಾಸ್.ಎಸ್.ಕೆ
ತೃತೀಯ ಬಿಕಾಂ

### ಜಾಲತಾಣಗಳು

https://manjunathtahir.blogspot.com - ಕನ್ನಡ ಇ- ಪುಸ್ತಕಗಳು
http://maheshuh.blogspot.com - ಕನ್ನಡ ಇ- ಪುಸ್ತಕಗಳು
https://www.pratilipi.com/ - ಕನ್ನಡ ಸಾಹಿತ್ಯದ ಆಪ್
https://www.shabdkosh.com - ಕನ್ನಡ ನಿಘಂಟು
https://seshadripuramblog.blogspot.com/ - ಶೇಷಾದ್ರಿಪುರಂ ಕಾಲೇಜು ಬ್ಲಾಗ್
Kendasampige.in - ಕನ್ನಡ ಇ- ಪುಸ್ತಕಗಳು
Kanaja.karnataka.gov.in - ಕನ್ನಡ ಇ - ಪುಸ್ತಕಗಳು


**ಸಲಹೆ ಮತ್ತು ಸಹಕಾರ**
ಡಾ. ಬಿ.ಜಿ.ಭಾಸ್ಕರ. ಪ್ರಾಚಾರ್ಯರು
ಹೆಚ್. ಎಂ. ಗೀತಾ, ವಿಭಾಗದ ಮುಖ್ಯಸ್ಥರು
ಎಂ. ಎನ್. ಅರ್ಚನ ತೇಜಸ್ವಿ , ಸಹ ಪ್ರಾಧ್ಯಾಪಕರು
ಡಾ. ನರಸಿಂಹಮೂರ್ತಿ ಜಿ , ಸಹಾಯಕ ಪ್ರಾಧ್ಯಾಪಕರು
ಡಾ. ಮಹೇಶ್ವರಿ ಜಿ, ಬಿ , ಸಹಾಯಕ ಪ್ರಾಧ್ಯಾಪಕರು

**ವಿದ್ಯಾರ್ಥಿ ಸಂಪಾದಕರು**
ಸುಹಾಸ್.ಎಸ್.ಕೆ - ತೃತೀಯ ಬಿ.ಕಾಂ 'ಬಿ' ವಿಭಾಗ
ಶ್ರೀ ಲಕ್ಷ್ಮಿ .ಅರ್ - ತೃತೀಯ ಬಿ.ಕಾಂ 'ಬಿ' ವಿಭಾಗ
ಭೀಮಶಂಕರ - ತೃತೀಯ ಬಿ.ಕಾಂ 'ಎ' ವಿಭಾಗ
ಗಿರೀಶ್. ವಿ - ಪ್ರಥಮ ಬಿ.ಕಾಂ 'ಎ' ವಿಭಾಗ
ಪ್ರವೀಣ. ಪಿ ಪ್ರಥಮ ಬಿ.ಕಾಂ 'ಇ' ವಿಭಾಗ